**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

ಸಿ.ಸಿ.ನಂ. 1431/2023

ಪಿ.ಡಬ್ಲ್ಯೂ.1

ದಿನಾಂಕ: 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿಯ ಪರ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸೀರೆ ವ್ಯಾಪಾರ ಮಾಡುತ್ತೇನೆ. ನನಗೆ ಆರೋಪಿತನು 2016 ನೇ ಇಸವಿಯಿಂದ ಪರಿಚಯ. ರಬಕವಿ-ಬನಹಟ್ಟಿಯಲ್ಲಿ ಸೀರೆ ವ್ಯಾಪಾರ ಮಾಡುವವರು ಸಾಕಷ್ಟು ಜನ ಇದ್ದಾರೆ ಎಂದರೆ ಹೌದು. ಆರೋಪಿತನು ನನ್ನ ಕಡೆಯಿಂದ ಕಚ್ಚಾ ಸಾಮಾಗ್ರಿಗಳನ್ನು ತೆಗೆದುಕೊಂಡು ಸೀರೆಯನ್ನು ತಯಾರಿಸಿ ಕೊಡುತ್ತಿದ್ದನು. ನಾನು ಆರೋಪಿತನ ಕಚ್ಚಾ ಸಾಮಗ್ರಿಗಳನ್ನು ಕೊಡುವ ಸಮಯದಲ್ಲಿ ಭದ್ರತೆಗಾಗಿ ಆರೋಪಿತನ ಕಡೆಯಿಂದ ಯಾವುದೇ ಚೆಕ್ಕನ್ನು ಪಡೆಯುತ್ತಿರಲಿಲ್ಲ. ನಾನು ಯಾವುದೇ ಚೆಕ್ಕನ್ನು ಪಡೆಯದೇ ಆರೋಪಿಗೆ ಕಚ್ಚಾ ಸಾಮಗ್ರಿಯನ್ನು ಕೊಡುತ್ತಿದ್ದೆನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತು ಕಚ್ಚಾ ಸಾಮಗ್ರಿಗಳನ್ನು ತೆಗೆದುಕೊಂಡು ಸೀರೆಯನ್ನು ತಯಾರು ಮಾಡಿ ಕೊಡುತ್ತಿದ್ದನುಎಂದರೆ ಹೌದು.

**ಆರೋಪಿಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.